**5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಸ್ಪೇಷಲ್ ಕೇಸ್ ನಂ.89/2021**

ಪ್ರಾ.ಸಾ. 2

ಚಾ.ಸಾ. 3

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 13.11.2024**

| | |
|---|---|
| ಸಾಕ್ಷಿದಾರರ ಹೆಸರು | ಪ್ರಕಾಶ್ |
| ತಂದೆಯ ಹೆಸರು | ಬಲ್ಲಯ್ಯ |
| ವಯಸ್ಸು | 43 ವರ್ಷ |
| ಉದ್ಯೋಗ | ಕೂಲಿ ಕೆಲಸ |
| ವಾಸ | ಮೋಳೆಕೊಪ್ಪಲು ಗ್ರಾಮ |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1. ಮೃತ ನಾಗರಾಜು ಯಾರು ಎಂದು ನನಗೆ ಗೊತ್ತಿಲ್ಲ. ಅವರು ಯಾವ ಜಾತಿಗೆ ಸೇರಿದವರು ಎಂದು ನನಗೆ ಗೊತ್ತಿಲ್ಲ. ಚಾಸಾ.1 ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿತರು ಯಾರು ಎಂದು ಹಾಗೂ ಅವರ ಜಾತಿ ನನಗೆ ಗೊತ್ತಿಲ್ಲ. ನಾಗರಾಜು ಅಪಘಾತದಿಂದ ತೀರಿಕೊಂಡಿದ್ದಾನೆಂದು ನನಗೆ ಗೊತ್ತಾಯಿತು. ಸದರಿ ಕೇಸಿನ ಬಗ್ಗೆ ನನಗೆ ಏನು ಗೊತ್ತಿಲ್ಲ. ಸಾಕ್ಷಿಗೆ ಈಗ ಮಹಜರ್ ತೋರಿಸುತ್ತಿದ್ದು ಅದರಲ್ಲಿ ಸಾಕ್ಷಿಯ ಸಹಿಯನ್ನು ಗುರುತಿಸಿದ್ದು ಮಹಜರನ್ನು ನಿಪಿ.2 ಎಂದು ಸಾಕ್ಷಿಯ ಸಹಿಯನ್ನು ನಿಪಿ.2 ಎ ಎಂದು ಗುರುತಿಸಲಾಗಿದೆ. ಈಗ್ಗೆ ಸುಮಾರು 4 ವರ್ಷದ ಹಿಂದೆ ಕ್ಯಾತನಗೆರೆ ರಸ್ತೆಯಲ್ಲಿ ಬರುವಾಗ ಅದಕ್ಕೆ ನನ್ನ ಸಹಿ ಪಡೆದುಕೊಂಡರು. ಯಾವ ವಿಚಾರದಲ್ಲಿ ಸಹಿ ಹಾಕಿದ್ದೇನೆಂದು ನನಗೆ ಗೊತ್ತಿಲ್ಲ. ಸಾಕ್ಷಿಗೆ ಈಗ ಪೊಟೋ ತೋರಿಸುತ್ತಿದ್ದು ಅದರಲ್ಲಿ ತಾನು ಇರುವುದಾಗಿ

ಒಪ್ಪಿಕೊಂಡಿದ್ದು, ಸದರಿ ಪೋಟೋವನ್ನು ನಿಪಿ.3 ಎಂದು ಗುರುತಿಸಲಾಗಿದೆ. ಪೋಟೋವನ್ನು ಕ್ಯಾತನಗೆರೆ ರಸ್ತೆಯಲ್ಲಿ ತೆಗೆಯಲಾಗಿತ್ತು. ಯಾವ ಉದ್ದೇಶಕ್ಕಾಗಿ ಪೋಟೋ ತೆಗೆಯಲಾಗಿತ್ತು ಎಂದು ನನಗೆ ಗೊತ್ತಿಲ್ಲ. ಪೊಲೀಸರ ಕೋರಿಕೆ ಮೇರೆಗೆ ನಿಪಿ.2 ಕ್ಕೆ ಸಹಿ ಮಾಡಿದ್ದು, ಅದರಲ್ಲಿ ಏನು ಬರೆದಿದೆ ಎಂದು ನನಗೆ ತಿಳಿದಿಲ್ಲ. ಘಟನೆ ಕುರಿತು ಬೇರೆ ಮಾಹಿತಿ ಇಲ್ಲ. ಪೊಲೀಸರಿಗೆ ನಾನು ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಗಿದೆ.)

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

*2.* ನಾನು, ಮೃತ ನಾಗರಾಜು ಹಾಗೂ ಶಿವಕುಮಾರ ಯಾವಾಗಲೂ ಮರ ಕುಯ್ಯುವ ಕೆಲಸ ಜೊತೆಯಲ್ಲಿಯೇ ಹೋಗಿ ಮಾಡುತ್ತಿದ್ದೆವು, ತೆಂಗಿನ ಮರ ಹತ್ತಿ ಕಾಯಿ ಕೀಳುವಾಗ ನಾನು ಹಗ್ಗ ಕಟ್ಟುತ್ತಿದ್ದೆ, ತೆಂಗಿನ ಮರದ ಕೆಳಭಾಗದಲ್ಲಿ ನೆಲಕ್ಕೆ ಬಿದ್ದರೆ ಪೆಟ್ಟು ಆಗದಂತೆ ಬಲೆ ಕಟ್ಟಿ ಮರ ಕುಯ್ದು ನಂತರ ತೆಂಗಿನ ಮರಕ್ಕೆ ಹತ್ತಿ ಮರ ಕುಯ್ಯುವವನನ್ನು ಕೆಳಗೆ ಇಳಿಸಿ ನಂತರ ಮರಕ್ಕೆ ಕಟ್ಟಿದ ಹಗ್ಗವನ್ನು ಎಳೆದು ಮರವನ್ನು ಕಳಕ್ಕೆ ಬೀಳಿಸುತ್ತಿದ್ದೆವು ಎಂದರೆ ಸರಿಯಲ್ಲ.

*3.* ದಿನಾಂಕ *03.03.2021* ರಂದು ಕಿರಗಂದೂರು ಗ್ರಾಮದಲ್ಲಿ ಇಟ್ಟಿಗೆ ಫ್ಯಾಕ್ಟರಿ ಇಟ್ಟಿರುವ ಪಾಪಣ್ಣ ರವರ ಮಗ ಅರುಣ ನನಗೆ ಸಿಕ್ಕಿ ಫ್ಯಾಕ್ಟರಿಯ ಬಳಿ ಒಂದು ತೆಂಗಿನ ಮರದ ಸುಳಿ ಒಣಗಿದ ಅದನ್ನು ಕುಯ್ದು ಕೊಡಿ ಎಂದು ಹೇಳಿದನು, ಈ ವಿಚಾರವನ್ನು ಶಿವಕುಮಾರ *1* ನೇ ಆರೋಪಿತನಿಗೆ ತಿಳಿಸಿ ನೀನು ತೆಂಗಿನ ಮರ ನೋಡಿಕೊಂಡು ಬಾ ಎಂದು ಹೇಳಿದ್ದೆ, ಅದರಂತೆ ದಿನಾಂಕ *09.03.2021* ರಂದು *1* ನೇ ಆರೋಪಿ ಇಟ್ಟಿಗೆ ಫ್ಯಾಕ್ಟರಿ ಬಳಿ ಹೋಗಿ ತೆಂಗಿನ ಮರ ನೋಡಿಕೊಂಡು ಅಲ್ಲೇ ಇದ್ದ ಅರುಣ್ ಕುಮಾರ್ ಬಳಿ ತೆಂಗಿನ ಮರ ಕುಯ್ಯಲು ರೂ.*6,000/-* ಹಣ ಪಡೆದುಕೊಂಡು ನನಗೆ ದಿನಾಂಕ *10.03.2021* ರಂದು ಇಟ್ಟಿಗೆ ಫ್ಯಾಕ್ಟರಿ ಬಳಿಗೆ ತೆಂಗಿನ ಮರ ಕುಯ್ಯಲು ಕರೆದುಕೊಂಡು ಬಂದಿರುತ್ತೇನೆ, ಬೆಳಗ್ಗೆ *8.00* ಗಂಟೆ ನೀನು

ಚಾಸಾ.*14* ರವರ ಇಟ್ಟಿಗೆ ಫ್ಯಾಕ್ಟರಿ ಹತ್ತಿರ ಬಾ ಎಂದು ಹೇಳಿದ, ಅದರಂತೆ ನಾನು ದಿನಾಂಕ *10.03.2021* ರಂದು ಬೆಳಗ್ಗೆ *9.45* ಗಂಟೆ ಸಮಯಕ್ಕೆ ಚಾಸಾ.*14* ರವರ ಇಟ್ಟಿಗೆ ಫ್ಯಾಕ್ಟರಿ ಬಳಿ ಹೋದಾಗ ಮೃತ ಮತ್ತು *1* ನೇ ಆರೋಪಿ ಬಂದು ಮೃತನು ಮರ ಕುಯ್ಯುವ ಮಿಷನ್ ಗರಗಸ ತೆಗೆದುಕೊಂಡು ಸುಮಾರು *80* ಅಡಿ ತೆಂಗಿನ ಮರ ಹತ್ತು ಬಿಟ್ಟಿದ್ದು, ಹಗ್ಗ ಕಟ್ಟಿ ಆ ಹಗ್ಗವನ್ನು ತಳಭಾಗದಲ್ಲಿ *1* ನೇ ಆರೋಪಿ ಹಿಡಿದುಕೊಂಡು ನಿಂತಿದ್ದ, ಮೃತನು ತನ್ನ ಬಳಿ ಇದ್ದ ಮಿಷನ್ ನಿಂದ ತೆಂಗಿನ ಮರವನ್ನು ನಾನೇ ಅಲ್ಲಿಗೆ ಹೋಗುವಷ್ಟರಲ್ಲಿ ಮುಕ್ಕಾಲು ಭಾಗ ಕುಯ್ದಿದ್ದ, *1* ನೇ ಆರೋಪಿ ನಾನು ಸ್ಥಳಕ್ಕೆ ಹೋಗುವಷ್ಟರಲ್ಲಿ ಹತ್ತಿಸಿದ್ದನು, ಮೃತನ ಕಾಲಿಗೆ ಹಗ್ಗ ಕಟ್ಟಿರಲಿಲ್ಲ, ಕೆಳಭಾಗದಲ್ಲಿ ಬಲೆ ಕಟ್ಟಿರಲಿಲ್ಲ, ಮರ ಕುಯ್ಯಲು ಯಾವುದೇ ಸುರಕ್ಷತಾ ಕ್ರಮ ಕೈಗೊಂಡಿರಲಿಲ್ಲ, ಅಷ್ಟರಲ್ಲಿ ಚಾಸಾ.*14* ರವರು ಬಂದಾಗ ಅವರು ಏಕೆ ಯಾವುದೇ ಸುರಕ್ಷತಾ ಕ್ರಮ ತೆಗೆದುಕೊಳ್ಳದೇ ಮೃತನನ್ನು ಮರಕ್ಕೆ ಹತ್ತಿಸಿದೆ ಎಂದು ಬೈದು ಮೃತನಿಗೆ ಪೂರ್ತಾ ಮರ ಕುಯ್ಯಬೇಡ ಅದು ಬಿದ್ದು ಹೋಗುತ್ತದೆ ಕೆಳಗೆ ಇಳಿದು ಬಿಡು ಎಂದು ಹೇಳಿದೆವು, ಆಗ ಕೆಳಗೆ ನಿಂತಿದ್ದ *1* ನೇ ಆರೋಪಿ ನಮ್ಮ ಮಾತನ್ನು ಕೇಳದೇ ನಾವು ಇಂತಹ ಎಷ್ಟು ಮರಗಳನ್ನು ಕುಯ್ದಿಲ್ಲ ಎಂದು ಹೇಳಿ ತೆಂಗಿನ ಮರಕ್ಕೆ ಕಟ್ಟಿದ್ದ ಹಗ್ಗವನ್ನು ತನ್ನ ಕೈಯಿಂದ ಎಳೆದು ಬಿಟ್ಟ ಆಗ ಎಳೆದ ರಭಸಕ್ಕೆ ತೆಂಗಿನ ಮರದ ಮೇಲ್ಭಾಗ ತುಂಡಾಗಿ ಕೆಳಗೆ ಬಿದ್ದಿತ್ತು, ಆಗ ಮೃತನು ಮರವನ್ನು ಹಿಡಿದು ಕೊಳ್ಳಲು ಆಗದೇ ತೆಂಗಿನ ಮರದ ಮೇಲ್ಭಾಗದಿಂದ ಕೆಳಗ್ಗೆ ನೆಲಕ್ಕೆ ಬಿದ್ದನು, ನಾನು ಹಾಗೂ ಚಾಸಾ.*14* ರವರು *1* ನೇ ಆರೋಪಿ ಎಲ್ಲರೂ ನೋಡಲಾಗಿ ಅವನ ತಲೆ, ಮೂಗು,ಬಾಯಿಂದ ರಕ್ತ ಬರುತ್ತಿತ್ತು ನಾವು ಆತನನ್ನು ಮಂಡ್ಯ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಸೇರಿಸಿದಾಗ *1* ನೇ ಆರೋಪಿ ಅವನು ಬೈಕಿನಿಂದ ಬಿದ್ದು ಪೆಟ್ಟಾಗಿರುತ್ತದೆ ಎಂದು ಹೇಳಿದ, ಆಗ ನಾನು ಪುಸ್ತಕಕ್ಕೆ ಸಹಿ ಮಾಡಿದ್ದೇನೆಂದು ಭಯ ಆಗಿ, *1* ನೇ ಆರೋಪಿಗೆ ಬೈದು ಈ ವಿಚಾರವನ್ನು ಚಾಸಾ.*14* ರವರಿಗೆ ತಿಳಿಸಿದೆ, ಆಗ ಸ್ವಲ್ಪ ಹೊತ್ತಿನಲ್ಲಿ ಮೃತನ ತಂಗಿ ಚಾಸಾ.*7, 8* ಹಾಗೂ *1* ರವರು ಅಲ್ಲಿಗೆ ಬಂದರು, ಆತನನ್ನು ಹೆಚ್ಚಿನ ಚಿಕಿತ್ಸೆಗೆ ಬೆಂಗಳೂರು ನಿಮಾನ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ವೈದ್ಯರು ತಿಳಿಸಿದ ಮೇರೆಗೆ ನಾವು ಕರೆದುಕೊಂಡು ಹೋದೆವು ಎಂದರೆ ಸರಿಯಲ್ಲ.

*4.* ದಿನಾಂಕ *15.03.2021* ರಂದು ಹುಲ್ಲಿಗೆರೆ ಗ್ರಾಮದ ಚಾಸಾ.*15* ರವರ ಮನೆಯ ಬಳಿ ಚಾಸಾ.*8, 10* ಹಾಗೂ *13* ರವರು ಪಂಚಾಯಿತಿಗೆ ಸೇರಿಸಿದ್ದು, ಚಾಸಾ.*15* ರವರು ಹೇಳಿದ ಮೇರೆಗೆ ನಾನು ಪಂಚಾಯಿತಿಗೆ ಹೋಗಿದ್ದಾಗ ನನ್ನ ಎಲ್ಲಾ ಸ್ನೇಹಿತರು, ಯಜಮಾನರು ಬಂದಿದ್ದು, ಅವರು ನಾಗರಾಜು ಮರದ ಮೇಲಿಂದ ಬಿದ್ದು ಪೆಟ್ಟು ಆಗಿರುವುದರಿಂದ ಆಸ್ಪತ್ರೆಯ ಖರ್ಚಿಗೆ ತಲಾ ರೂ.*1,50,000/-* ದಂತೆ ರೂ.*3,00,000/-* ಹಣ ಕೊಡಿ ಎಂದು ಹೇಳಿದ್ದಕ್ಕೆ

ನಾನು ಮೂರು ಜನರೂ ಸೇರಿ ಹಣ ಕೊಟ್ಟೆವು ಆದರೆ *1* ನೇ ಆರೋಪಿ ಹಣ ಕೊಡಲಿಲ್ಲ, ಅಲ್ಲಿಂದ *1* ನೇ ಆರೋಪಿ ಹೊರಟು ಹೋದನು ಎಂದರೆ ಸರಿಯಲ್ಲ.

*5.* ದಿನಾಂಕ *16.03.2021* ರಂದು ಸಂಜೆ *6.30* ಗಂಟೆ ಸಮಯದಲ್ಲಿ ಮೃತನ ತಾಯಿ ಚಾಸಾ.*8,* ತಂದೆ ಚಾಸಾ.*10,* ತಂಗಿ ರೂಪ ಚಾಸಾ.*7* ರವರು ಮೃತನ ಹೆಂಡತಿ ಚಾಸಾ.*1,* ಮಗಳು *1* ನೇ ಆರೋಪಿ ಮನೆ ಬಳಿ ಹೋಗಿ ಪ್ರಕಾಶ ಮತ್ತು ಅರುಣ ಆಸ್ಪತ್ರೆ ಖರ್ಚಿಗೆ ಎಂದು ಕೊಟ್ಟಿರುವ ರೂ.*3,00,000/-* ಹಣ ನೀನೇ ತೆಗೆದುಕೋ ನಾಗರಾಜುನನ್ನು ಸರಿ ಮಾಡಿಕೊಡು ಎಂದು ಕೇಳಿದಾಗ ಎಲ್ಲಾ ಆರೋಪಿತರು ಅವ್ಯಾಚ ಶಬ್ಧದಿಂದ ಜಾತಿ ನಿಂದನೆ ಮಾಡಿ ಚಾಸಾ.*7* ರವರನ್ನು ತಳ್ಳಿ ಪ್ರಾಣ ಬೆದರಿಕೆ ಹಾಕಿದರು ಎಂದು ತಿಳಿಯಿತು ಎಂದರೆ ಸರಿಯಲ್ಲ.

*6.* ದಿನಾಂಕ *19.03.2021* ರಂದು ಬೆಳಗ್ಗೆ ನಾನು ಮನೆಯಲ್ಲಿದ್ದಾಗ ನಾಗರಾಜು ಬೆಳಗ್ಗೆ *8.30* ಗಂಟೆ ಸಮಯದಲ್ಲಿ ಮಂಡ್ಯ ಜಿಲ್ಲಾ ಆಸ್ಪತ್ರೆಯಲ್ಲಿ ಸತ್ತು ಹೋದ ವಿಷಯ ನನಗೆ ಗೊತ್ತಾಯಿತು. *1* ನೇ ಆರೋಪಿ ನಿರ್ಲಕ್ಷ್ಯತನದಿಂದ ತೆಂಗಿನ ಮರಕ್ಕೆ ನಾಗರಾಜು ರವರನ್ನು ಹತ್ತಿಸಿ ಯಾವುದೇ ಸುರಕ್ಷತಾ ಕ್ರಮ ಕೈಗೊಳ್ಳದೇ ಇದ್ದರಿಂದ ನಾಗರಾಜು ಸುಮಾರು *60* ಅಡಿ ತೆಂಗಿನ ಮರದ ಮೇಲ್ಭಾಗದಿಂದ ಕೆಳಗೆ ಬಿದ್ದು ತಲೆಗೆ ಪೆಟ್ಟು ಆಗಿ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿರುತ್ತಾನೆ, ಆತನ ಸಾವಿಗೆ *1* ನೇ ಆರೋಪಿಯೇ ಕಾರಣ ಎಂದು ಈಗ ಓದಿ ಹೇಳಿದಂತೆ ನಿಪಿ.*4* ರಂತೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ.

*7.* ಚಾಸಾ.*1* ರವರು ದೂರು ಕೊಟ್ಟ ನಂತರ ದಿನಾಂಕ *20.03.2021* ರಂದು ಪೊಲೀಸರು ಚಾಸಾ.*4* ಹಾಗೂ *5* ಪಂಚರೊಂದಿಗೆ ಮೇಲೆ ತಿಳಿಸಿದ ಘಟನಾ ಸ್ಥಳವಾದ ಚಾಸಾ.*14* ರವರಿಗೆ ಸೇರಿದ ಸಿಮೆಂಟ್ ಇಟ್ಟಿಗೆ ಫ್ಯಾಕ್ಟರಿ ಹತ್ತಿರದ ಜಮೀನಿನಲ್ಲಿ ಘಟನಾ ಸ್ಥಳವನ್ನು ನಾನು ತೋರಿಸಿದ ಮೇರೆಗೆ ಪೊಲೀಸರು ನಿಪಿ.*2* ರಂತೆ ವಿವರವಾದ ಮಹಜರನ್ನು ಬೆಳಗ್ಗೆ *10.00* ರಿಂದ *10.45* ರವರೆಗೆ ಮಾಡಿ ಸ್ಥಳದಲ್ಲಿ ನಿಪಿ.*3* ರಂತೆ ಪೊಟೋ ತೆಗೆದು ಬರೆದು ಓದಿ ಹೇಳಿದಾಗ ಸರಿ ಇದೆ ಎಂದು ಸಹಿ ಮಾಡಿದ್ದೇನೆಂದರೆ ಸರಿಯಲ್ಲ.

*8.* ಘಟನೆಯ ಹಾಗೂ ಮಹಜರಿನ ಎಲ್ಲಾ ವಿಷಯ ತಿಳಿಸಿದ್ದಿದ್ದರೂ ಕೂಡ, *1* ನೇ ಆರೋಪಿತ ನನ್ನ ಸ್ನೇಹಿತನಾದ್ದರಿಂದ, ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>**

ಪಾಟೀ ಸವಾಲು ಇಲ್ಲ ಎಂದಿರುತ್ತಾರೆ.

(ಮರು ವಿಚಾರಣೆಃಇಲ್ಲ)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ನಿರ್ಮಲ ಕೆ.)

C/c 5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮಂಡ್ಯ.